**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರಃ 439/2016
ಪಿ.ಡಬ್ಲ್ಯೂ : 2

ದಿನಾಂಕಃ 26-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ವೈ ಎಸ್ ಎಸ್ ವಕೀಲರಿಂದಃ

1. ಕಾಲುದಾರಿಯನ್ನು ರಸ್ತೆ ಮಾಡಬೇಕಾಗಿರುವುದು ಪಂಚಾಯತಿಯವರೇ. ಪಂಚಾಯತಿಯವರಿಗೆ ಆ ರಸ್ತೆಗೆ ಹಣ ಇಡಬೇಕು ಎಂದು ಹೇಳಿರುತ್ತೇವೆ, ಆ ರೀತಿ ರಸ್ತೆ ಮಾಡಲು ಹಣ ಇಟ್ಟಿರುತ್ತಾರೆ. ಎಷ್ಟು ಹಣ ಇಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪಂಚಾಯತಿಯವರು ಆ ರೀತಿ ಹಣ ಇಟ್ಟ ಬಗ್ಗೆ ನಾನು ದಾಖಲೆ ಕೊಟ್ಟಿರುವುದಿಲ್ಲ. ಪಂಚಾಯತಿಯವರನ್ನು ಪಾರ್ಟಿಯಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರನ್ನು ಮಾಡುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

2. ನಾನು ಹೊಸದಾಗಿ ಪ್ರತಿವಾದಿಯವರ ಜಾಗದಲ್ಲಿ ರಸ್ತೆ ಮಾಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ನಾವು ಪ್ರತಿವಾದಿಯವರ ಜಾಗದಲ್ಲಿ ರಸ್ತೆ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಸರ್ಕಾರಿ ಜಾಗದಲ್ಲಿ ರಸ್ತೆ ಮಾಡಬೇಕು ಅಂತ ಕೇಳುತ್ತಿದ್ದೇವೆ. ಅದು ಹೊಳೆಯ ಬದಿ ಜಾಗ ಎಂದು ನುಡಿಯುತ್ತಾರೆ. ಸರ್ಕಾರದವರನ್ನು ಪಾರ್ಟಿಯಾಗಿ ಮಾಡಬೇಕು ಎಂದು ನನಗೆ ಗೊತ್ತಿರಲಿಲ್ಲ.

3. ಸರ್ಕಾರಿ ಜಾಗ ಎಂದರೆ ಯಾವ ರೀತಿಯ ಸರ್ಕಾರಿ ಜಾಗ ಎಂದರೆ ಸಾಕ್ಷಿ ಅದು ಹೊಳೆಯ ಬದಿ ಜಾಗ ಪರಂಬೋಕು ಜಾಗ ಎಂದು ನುಡಿಯುತ್ತಾರೆ. ಈ ವ್ಯಾಜ್ಯದಲ್ಲಿ ಆ ಸ್ಥಳದ ಸರ್ವೆ ನಂಬ್ರ ನಮೂದಿಸಿರುತ್ತೇವೆ. ಈ ದಾವೆಯಲ್ಲಿ ಸರ್ವೆ ನಂಬ್ರ 72/ 2 ಎ ಪಿ 2 , ಸರ್ವೆ ನಂಬ್ರ 69/6 ಪಿ 3 , ಸರ್ವೆ ನಂಬ್ರ 69/6 ಪಿ 4 ರ ಸ್ಥಳವು 1 ನೇ ಪ್ರತಿವಾದಿಯ ಸ್ಥಳಗಳು ಎಂದರೆ ಸಾಕ್ಷಿ ಇವುಗಳೆನ್ನಾ ಅವರ ಜಾಗದ ಸ್ಥಳ, ರೋಡು ಎಂದು ತೋರಿಸಿದ ಸ್ಥಳ ಅವರ ಸ್ಥಳಗಳಲ್ಲ.

4. ಸರ್ವೆ ನಂಬ್ರ 69/6 ಪಿ 5 ರ ಸ್ಥಳ ಇಲಿಜಾರವರ ಸ್ಥಳ ಎಂದರೆ ಸಾಕ್ಷಿ ಅವರ ಸ್ಥಳ ಅಲ್ಲಿ ಯಾವುದು ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬ್ರ 69/7 ಎ ಪದ್ಮಾವತಿಯವರ ಜಾಗ ಎಂದರೆ ಸಾಕ್ಷಿ ಅದು ನಮ್ಮದೇ ಸ್ಥಳ ಎಂದು ನುಡಿಯುತ್ತಾರೆ. ಈ 5 ಜಾಗಗಳನ್ನು ಹೊರತು ಪಡಿಸಿ ಬೇರೆ ಜಾಗಗಳನ್ನು ದಾವಾ ಶೆಡ್ಯೂಲ್ ನಲ್ಲಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ಈ ಜಾಗಗಳು ರೋಡು ಇರುವ ಜಾಗಗಳಲ್ಲ ಎಂದು ನುಡಿಯುತ್ತಾರೆ. ರಸ್ತೆ ಹೊಳೆಬದಿಯಲ್ಲಿ ಇರುತ್ತದೆ. ಹೊಳೆ ಬದಿಯಲ್ಲಿರುವ ರಸ್ತೆಯ ಜಾಗದ ಸರ್ವೆ ನಂಬ್ರ ನನಗೆ ಗೊತ್ತಿರುವುದಿಲ್ಲ.

5. ಕರಿಯಾರವರನ್ನು ಪಕ್ಷಗಾರರನ್ನಾಗಿ ಮಾಡಿದ್ದು, ಅವರ ಜಾಗವನ್ನು ಈ ದಾವೆಯಲ್ಲಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ಅವರ ಜಾಗ ಅಲ್ಲಿ ಯಾವುದು ಇಲ್ಲ ಎಂದು ತೋರಿಸಲು ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಯಾವುದೇ ಕಾರಣ ಇಲ್ಲದೇ ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಹಾಗೂ ನಾನು ಹೇಳುವಂತಹ ರಸ್ತೆ ದಾವಾ ವ್ಯಾಜ್ಯದ ಭೂಮಿಯಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ರೋಡು ಬಿಡಬೇಕು ಅಂತ ಡಿ ಸಿ ಯವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

6. ಯಾರ ಭೂಮಿಯಲ್ಲಿ ಎಷ್ಟು ಅಗಲದ ರಸ್ತೆ ಮಾಡಬೇಕು ಅಂತ ಡಿ ಸಿ ಯವರು ಯಾರಿಗೆ ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ದಾಖಲೆ ನನ್ನ ಬಳಿ ಇರುವುದಿಲ್ಲ, ಪೊಲೀಸರಿಗೆ ಈ ರೀತಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸ್ ಪ್ರಕರಣ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಡಿ ಸಿ ಯವರ ಆದೇಶದಂತೆ ರಸ್ತೆ ಮಾಡಿರುವುದಿಲ್ಲ ಅಂತ ನಾನು ಡಿ ಸಿ ಯವರಿಗೆ ದೂರು ಕೊಟ್ಟಿರುವುದಿಲ್ಲ. ನನಗೆ ಪ್ರಕರಣದ ವಿಚಾರವೇ ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ದಾವೆ ನಾನು ಹೇಳಿದ ರೀತಿಯಲ್ಲಿ ನಿಲ್ಲುವಂತ ದಾವೆ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**